**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ .**

**<u>ಸಿ.ಸಿ ನಂಃ 504 / 2015</u>**

| | | |
|---|---|---|
| **ಸಾಕ್ಷಿಯ ಹೆಸರುಃ** | **ಮಹೇಶ** | **ಫ್ರಾಸಾಃ 22** |
| **ತಂದೆಯ ಹೆಸರುಃ** | **ಗಣೇಶಚಾರ್** | **ಚಾಸಾಃ 34** |
| **ವಯಸ್ಸುಃ** | **43 ವರ್ಷ** | **ದಿಃ 10-02-2026** |
| **ಉದ್ಯೋಗಃ** | **ಪೋಲಿಸ್ ನೀರಿಕ್ಷಕರು, ಲೋಕಾಯುಕ್ತ, ಬೆಂಗಳೂರು** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಮಳವಳ್ಳಿ** | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ನಾನು ನವೆಂಬರ್-2012 ರಿಂದ ಮೇ-2015 ರವರೆಗೆ ಪಿ.ಎಸ್.ಐ. ಅಂತಾ ಸಾಲಿಗ್ರಾಮ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01.10.2014 ರಂದು ಕೆ ಆರ್ ನಗರದ ಸರಕಾರಿ ಆಸ್ಪತ್ರೆಯಲ್ಲಿ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ರಾತ್ರಿ 8.30 ಗಂಟೆಗೆ ಸ್ವೀಕರಿಸಿ ರಾತ್ರಿ 9.00 ಗಂಟೆಗೆ ಪೋಲಿಸ್ ಠಾಣೆಗೆ ಬಂದು ಠಾಣಾ ಪ್ರಕರಣ ಸಂಖ್ಯೆ 198/2014 ರಂತೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-35 ರವರಿಗೆ ಹಸ್ತಾಂತರಿಸಿರುತ್ತೇನೆ. ಚಾಸಾ-35 ರವರ ಸೂಚನೆಯಂತೆ ದಿನಾಂಕ 01.11.2014 ರಂದು 3 ನೇ ಆರೋಪಿಯನ್ನು ಮದ್ಯಾಹ್ನ 3.00 ಗಂಟೆಗೆ ಭೇರ್ಯ ಗ್ರಾಮದ ಬಸ್ ನಿಲ್ದಾಣದ ಬಳಿ ವಶಕ್ಕೆ ಪಡೆದು ಮಧಾಹ್ನ 3.30 ಗಂಟೆಗೆ ಚಾಸಾ-35 ರವರ ಮುಂದೆ ಹಾಜರುಪಡಿಸಿರುತ್ತೇನೆ. ನಿಪಿ.14 ಎಂದು ನಿಶಾನೆಪಡಿಸಿದಲಾದ ಪ್ರಥಮ ವರ್ತಮಾನ ವರದಿಯಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀ.ಹೆಚ್.ಕೆ.ಸಿ.ವಕೀಲರಿಂದ ಃ**

1. ದಿನಾಂಕ 01.10.2014 ರಂದು ನಾನು ಸಾಲಿಗ್ರಾಮ ಪೋಲಿಸ್ ಠಾಣೆಯ ಕಾನೂನು ಸುವ್ಯವಸ್ಥೆ ಮೇಲ್ವಿಚಾರಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನಮ್ಮ ಠಾಣೆಯ ಉಳಿದ ಸಿಬ್ಬಂದಿಗಳು ನನ್ನ ಅಧೀನದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ಆದ ಘಟನೆಯ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಿನಾಂಕ 26.09.2014 ರಂದು ನಡೆದ ಘಟನೆಯ ಬಗ್ಗೆ ಮಾಹಿತಿ ಇದೆ ಎಂದು ನುಡಿದಿರುತ್ತಾರೆ. ದಿನಾಂಕ 26.09.2014 ರಂದು ಯಾರು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ.

2. ನಮ್ಮ ಠಾಣೆಯ ಪ್ರಕರಣಗಳ ನಮ್ಮ ಕೇಸ್ ಡೈರಿಗಳಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ನಿಂಗಮ್ಮರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೋದ ಬಗ್ಗೆ ಎಂ.ಎಲ್.ಸಿ ಮಾಹಿತಿಯು ಯಾವಾಗ ಮಾಹಿತಿ ಬಂದಿರುತ್ತದೆ ಎಂದು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ದಿನಾಂಕ 26.09.2014 ರಂದು ನಾನು ಕರ್ತವ್ಯದಲ್ಲಿ ಇದ್ದೇನೊ ಇಲ್ಲವೋ ಎಂದು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ಒಂದು ವೇಳೆ ದಿನಾಂಕ 26.09.2014 ರಲ್ಲಿ ನಾನು ರಜೆಯಲ್ಲಿ ಇದ್ದಿದ್ದರು ಸಹ ಮರುದಿನ ಬಂದು ನಾನು ಹಿಂದಿನ ದಿನ ಠಾಣೆಯಲ್ಲಿ ಆದ ವಿಚಾರಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆ.

3. ದಿನಾಂಕ 26.09.2014 ರಂದು ನಮ್ಮ ಠಾಣೆಗೆ ಎಂ.ಎಲ್.ಸಿ ಮಾಹಿತಿ ಬಂದ ನಂತರ ನಮ್ಮ ಠಾಣೆಯಿಂದ ಅದರ ಸಂಬಂಧ ಯಾವ ಕ್ರಿಯ ಕೈಗೊಂಡಿದಾರೆ ಎಂದು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ಸಾಕ್ಷಿಯು ಮುಂದುವರೆದು ನಮ್ಮ ಠಾಣಾಧಿಕಾರಿಗಳು ಎಂ.ಎಲ್.ಸಿ ಪಡೆದ ನಂತರ ಆಸ್ಪತ್ರೆಗೆ ಹೇಳಿಕೆ ಪಡೆಯಲು ಹೋದಾಗ ಗಾಯಾಳು ದೂರು ಕೊಟ್ಟಿರುವುದಿಲ್ಲ ಹಾಗೂ ಅವರು ತಡವಾಗಿ ದೂರು ನೀಡಿರುತ್ತೇನೆ ಎಂದು ಪಿರ್ಯಾದಿಯಲ್ಲಿ ನಮೂದಾಗಿರುತ್ತದೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ. ಈ ಪ್ರಕರಣದ ಗಾಯಾಳು ನಿಂಗಮ್ಮ ಆಗಿದ್ದು, ದೂರನ್ನು ಚಾಸಾ-1 ರವರು ನೀಡಿರುತ್ತಾರೆ. ನಿಂಗಮ್ಮರವರಿಂದ ಹೇಳಿಕೆ ಪಡೆಯಲು ನಮ್ಮ ಪೋಲಿಸ್ ಸಿಬ್ಬಂದಿ ಯಾವ ಆಸ್ಪತ್ರೆಗೆ ಹೋಗಿದ್ದರು ಎಂದು ನನಗೆ ದಾಖಲೆಗಳನ್ನು ನೋಡದೆ ಹೇಳಲಾಗುವುದಿಲ್ಲ. ಈ ಹಿಂದೆ ಗಾಯಾಳು ನಿಂಗಮ್ಮರವರ ಹೇಳಿಕೆ ಪಡೆಯಲು ನಮ್ಮ ಪೋಲಿಸ್ ಸಿಬ್ಬಂದಿ ಹೋಗಿದ್ದಾಗ ನಿಂಗಮ್ಮರವರು ತಮ್ಮ ಹೇಳಿಕೆ ನೀಡಿರುವುದಿಲ್ಲ ಎಂದು ನಾನು ಈ

ಪ್ರಕರಣದ ಕಡತವನ್ನು ಚಾಸಾ–35 ರವರಿಗೆ ಕೊಡುವ ಕಾಲಕ್ಕೆ ತನಿಖಾ ಡೈರಿಯಲ್ಲಿ ನಮೂದಿಸಿರುವುದಿಲ್ಲ.

4. ಆರೋಪಿತರ ತಪ್ಪಿನಿಂದ ನಿಂಗಮ್ಮರವರ ಮರಣ ಆಗಿರುವುದಿಲ್ಲ ಬದಲಾಗಿ ನಿಂಗಮ್ಮರವರೇ ತಮ್ಮ ವಯೋಸಹಜ ಕಾಯಿಲೆಯಿಂದ ಬಿದ್ದು ಹೃದಯಾಘಾತವಾಗಿ ಮರಣ ಹೊಂದಿದ ಕಾರಣ ನಾವು ದಿನಾಂಕ 26.09.2014 ರಿಂದ 01.10.2014 ರ ವರೆಗೆ ಎಂ.ಎಲ್.ಸಿ ಮಾಹಿತಿ ಬಂದರು ಸಹ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ರಾಜಕೀಯ ಪ್ರೇರಣೆಯಿಂದ ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ದೂರಿನ ಆಧಾರದ ಮೇರೆಗೆ ಆರೋಪಿತರ ವಿರುದ್ಧ ನಾನು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**